ಮಗ ಸತ್ತು ಹೋದನೆಂದು ಬ್ರಾಹ್ಮಣನೊಬ್ಬ ದೊರೆ ಶ್ರೀರಾಮನಿಗೆ ದೂರಿತ್ತ. ಅದಕ್ಕಾಗಿ ಶ್ರೀರಾಮನಿಂದ ಶಂಭೂಕನ ವಧೆಯಾಯಿತು ಎಂಬುದು ಆ ಪ್ರಸಂಗ. ಕುವೆಂಪುರವರು ಆ ಕಥೆಯ ಸಾಮಗ್ರಿಯನ್ನು ಹೊಸ ರೀತಿಯಿಂದ ದೃಶ್ಯವಸ್ತುವಾಗಿಸಿದರು. ರಾಮನ ನಿರ್ಣಯ ಶಂಭೂಕನ ಪರವಾಗಿ ಬಂದು ಬ್ರಾಹ್ಮಣನಿಗೆ ಶಿಕ್ಷೆಯಾಯಿತು. 'ಮಹಾಕವಿಯ ಕೃತಿಯಲ್ಲಿ ಬಂದಳಿಕೆಗಳಂತೆ ಸೇರಿಕೊಂಡಿರುವ ಅಲ್ಪದೃಷ್ಟಿಯ ಕುಕವಿ ಕೃತವಾದ ಪ್ರಕ್ಷಿಪ್ತಗಳನ್ನು ತಿರಸ್ಕರಿಸಿ ವರ್ಣಭ್ರಾಂತಿಯನ್ನು ಹೋಗಲಾಡಿಸಲು ತಾವು ಶೂದ್ರ ತಪಸ್ವಿಯನ್ನು ಪುನರ್‍ರಚಿಸಿದ್ದು' ಎಂದು ಕುವೆಂಪು ಅದರ ಮುನ್ನುಡಿಯಲ್ಲಿ ಹೇಳುತ್ತಾರೆ.

ಈ ನಾಟಕ ಅಂದಿನ ದಿನಗಳಲ್ಲಿ ಕೋಲಾಹಲವನ್ನೇ ಎಬ್ಬಿಸಿತು. ಅಂದು ಸಾರಸ್ವತ-ಸಾರ್ವಜನಿಕ ವಲಯದಲ್ಲಿ ಉಂಟಾದ ವಾದ-ವಿವಾದದ 'ಬಿಸಿ' ಹೇಗಿತ್ತೆಂಬುದನ್ನು ಕುವೆಂಪು ಅವರ ಮಾತುಗಳಲ್ಲೇ ಕೇಳಿ.

'ಆ ದೃಶ್ಯ ಕೃತಿ ಪ್ರಕಟವಾದಾಗ ವಾಚಕ ವರ್ಗದ ಹೃದಯಾಕಾಶದಲ್ಲಿ ಗಾಳಿಯೆದ್ದು ಮೋಡ ಕವಿದು ಗುಡುಗು ಮಿಂಚಾಡಿದಾ ಕ್ಷೋಭೆ ಅಂದಿನ ಪತ್ರಿಕಾ ಸರೋವರಗಳಲ್ಲಿ ಪ್ರತಿಫಲಿತವಾಗಿತ್ತು. ಆ ಉದ್ರೇಕಕ್ಕೆ ಮೂಲ ಕಾರಣ ಈ ಕೃತಿ ಜಾತಿ ಮಾತ್ಸರ್ಯದಿಂದ ಪ್ರೇರಿತವಾದ ಮೂದಲಿಕೆ ಎಂಬ ಆಜ್ಞ ಭಾವನೆ. ಆ ಭಾವನೆ ತೆಗಳಿಕೆಗೆ ಮಾತ್ರವಲ್ಲದೆ ಹೊಗಳಿಕೆಗೂ ಕಾರಣವಾಯಿತೆಂಬುದನ್ನು ನೆನೆದರೆ ವಿಷಾದವಾಗುತ್ತದೆ' ಎನ್ನುತ್ತಾರೆ ಕುವೆಂಪು.

ಆ ಸಂದರ್ಭದಲ್ಲಿ ಕುವೆಂಪುರವರ 'ಶೂದ್ರ ತಪಸ್ವಿ' ನಾಟಕವನ್ನು ಕಟುವಾಗಿ ವಿಮರ್ಶಿಸಿದವರು ಮಾಸ್ತಿಯವರು. 1944ರ ಜುಲೈ ತಿಂಗಳ 'ಜೀವನ' ಮಾಸಪತ್ರಿಕೆಯಲ್ಲಿ 'ಕಾವ್ಯಾವಲೋಕನ' ಎಂಬ ಹೆಸರಿನಲ್ಲಿ ಮಾಸ್ತಿಯವರು ವಿಮರ್ಶನ ಲೇಖನವನ್ನು ಬರೆದರು. ಇದಕ್ಕೆ ಪ್ರತಿಯಾಗಿ ಕುವೆಂಪುರವರು 'ಶೂದ್ರ ತಪಸ್ವಿ ಮಾರ್ನುಡಿ' ಎಂದು ಬರೆದು ಮಾಸ್ತಿಯವರಿಗೆ ಉತ್ತರ ನೀಡಿದರು. ಅವರಿಬ್ಬರ ಮಾತುಗಳ 'ಏಟು ಇದಿರೇಟು'ಗಳ ವೈಚಾರಿಕ ಸಂಘರ್ಷದ ಎರಡು ತುಣುಕುಗಳನ್ನಷ್ಟೆ ನಾನು ಈ ಕೆಳಗೆ ನೀಡಿದ್ದೇನೆ.



**ಮಾಸ್ತಿ:** 'ಅಪರಾಧ ಯಾವುದು ಎಂಬ ವಿಷಯದಲ್ಲಿ ಉತ್ತರಕಾಂಡದ ಭಾವನೆಗೂ ಈ ದೃಶ್ಯದ ಭಾವನೆಗೂ ಬಹಳ ಅಂತರವಿದೆ ಎಂಬುದನ್ನು ಹೇಳಬೇಕಾಗಿಲ್ಲ. ಉತ್ತರಕಾಂಡದ ಕಥೆಯಲ್ಲಿ ಪ್ರಕಟವಾಗುವ ಮನೋಧರ್ಮ ವರ್ಣ ವ್ಯವಸ್ಥೆಯನ್ನು ಕುರಿತ ಒಂದು ತೀವ್ರವಾದ ಶ್ರದ್ಧೆ. ಈ ಕಾವ್ಯದಲ್ಲಿ ಅದನ್ನು ಜಾತಿ ಗರ್ವಾಂಧತೆ ಎಂದು ವರ್ಣಿಸಿರುವುದು ಕಾಣುತ್ತದೆ'.

**ಕುವೆಂಪು:** 'ಅವಿವೇಕ ತೀವ್ರ ಶ್ರದ್ಧೆಯಾದರೂ ಅವಿವೇಕವಾಗಿಯೇ ನಿಲ್ಲುತ್ತದೆ. ಆದ್ದರಿಂದ ತನ್ನ ಶ್ರದ್ಧಾಂಶದಲ್ಲಿ ಅಲ್ಲದಿದ್ದರೂ ಅವಿವೇಕಾಂಶದಲ್ಲಿ ತಿದ್ದುಪಡಿಯಾಗಬೇಕಾದುದೇ ಆಗತ್ಯ. ಈ ದೃಶ್ಯದಲ್ಲಿ ನಡೆದಿರುವ ಕೆಲಸವೂ ಅದೇ. ಶ್ರದ್ಧೆಯ ಖಂಡನೆಯಲ್ಲ. ಅವಿವೇಕದ ತಿದ್ದುಪಡಿ'.

**ಮಾಸ್ತಿ:** 'ಜಾತಿಕುಲದ ಮಾತು ಬಂದಾಗ ಮನಸ್ಸನ್ನು ಉದ್ರೇಕಕ್ಕೆ ಬಿಡದೆ ಸಮಾಧಾನದಿಂದ ಚರ್ಚಿಸುವ ಬಲುಮೆ ಸಮಾಜದ ಶ್ರೇಯಸ್ಸಿನ ಮುಖ್ಯ ಸಾಧನಗಳಲ್ಲಿ ಒಂದು'.

**ಕುವೆಂಪು:** 'ಸಾಹಿತ್ಯದಲ್ಲಂತೂ ಅಂತಹ ಪಕ್ಷೋದ್ರೇಕ ನಿಜವಾಗಿ ಅನರ್ಥಕರ, ಹಾನಿಕರ. ರಸಭಂಗಕರ. ಕೃತಿಕಾರನ ಮೇಲೆ ಉಕ್ಕುವ ದ್ವೇಷಾಸೂಯೆಗಳಿಂದ